*ಎನ್. ಪ್ರಕಾಶ, ದೇವನಹಳ್ಳಿ*
*ಶೃಂಗಾರಕ್ಕಾಗಿ ಗಂಡಸರಿಗಿಂತ ಹೆಂಗಸರು ಅಧಿಕ ಸಮಯ ವ್ಯಯ ಮಾಡುವುದೇಕೆ?*



ಸಮಯ ರಸಮಯವಾಗಬೇಕಾದರೆ ರಮಣಿ ರಮಣೀಯವಾಗಿರಬೇಕಲ್ಲ!

*ಎಂ.ಕೆ. ರವಿಕಾಂತ, ತುಮಕೂರು*
*ಎಲ್ಲವೂ ವಿಧಿಯಾಟ ಎನ್ನುವ ಮನುಜ ಮರಣಕ್ಕೆ ಅಂಜುವುದೇಕೆ?*
ಮಿಕ್ಕೆಲ್ಲಾ ಆಟಕ್ಕೂ ಇರುವ **action replay** ಮರಣಕ್ಕೆ ಇಲ್ಲದಿರುವುದರಿಂದ!

*ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ*
*ಷಹಜಹಾನ್ ತನ್ನ ಪ್ರಿಯತಮೆಯ ನೆನಪಿಗಾಗಿ ತಾಜ್‌ಮಹಲ್ ಕಟ್ಟಿಸಿದ; ಈಗಿನ ಹುಡುಗರು ಏನನ್ನು ಕಟ್ಟಿಸುವರು?*
ಅವರಿಂದಲೇ ಫೋನ್ ಬಿಲ್‌ಗಳನ್ನು, ಹೋಟೆಲ್ ಬಿಲ್‌ಗಳನ್ನು ಕಟ್ಟಿಸುವರು!

*ಮಹಾಲಿಂಗ ಎಂ. ಗೋರಬಾಳ, ಮಾಣಕವಾಡಿ*
*ಇಲ್ಲೊಬ್ಬ ಅಧಿಕಾರಿಯು ಎಲ್ಲರನ್ನೂ ಗುರ್... ಗುರ್... ಎನ್ನುತ್ತ ನೋಡಲು ಕಾರಣವೇನು?*




ಶ್ವಾನದಳದ ಮುಖ್ಯಸ್ಥರಾಗಿದ್ದರೋ ಏನೋ!

*ಆರ್. ವಿಜಯಲಕ್ಷ್ಮಿ, ಕೊಳ್ಳೇಗಾಲ*
*ವಿದ್ಯಾವಂತರಿಂದಲೇ ಜಾತಿ ಪಿಡುಗು ಹೆಚ್ಚಾಗುತ್ತಿದೆಯಂತೇ...?*
'ನಿಜಾಯತಿ ಮೆರೆಯಬೇಕು' ಎಂಬುದನ್ನು 'ನಿನ್ನ ಜಾತಿ ಮೆರೆಯಬೇಕು' ಎಂದು ಕೇಳಿಸಿಕೊಂಡುದರ ಫಲವಂತೆ!

*ಕೆ.ಹೆಚ್.ರಾಮಕೃಷ್ಣಾ ರೆಡ್ಡಿ, ಯಲಹಂಕ*
*ಇದುವರೆಗಿನ ರಾಜಕೀಯ ಇತಿಹಾಸದಲ್ಲಿ ಅಸಲಿ ಹೀರೋ ಎನಿಸಿಕೊಂಡಿರುವ ರಾಜಕಾರಣಿ ಯಾರು?*
'ಸರ್ದಾರ್ ವಲ್ಲಭಭಾಯ್ ಪಟೇಲ್' ಎಲ್ಲಾ ಸಂಸ್ಥಾನಗಳನು ಕೂಡಿಸಿ ಭಾರತದ ಸರವನ್ನು ರೂಪಿಸಿದ ದಾರ ಅವರು!

*ಆರ್. ಮಧುಸೂದನ್, ಹಾಸನ*
*ಎರಡು ಮಕ್ಕಳ ತಾಯಿ ಆದಮೇಲೂ ಹೇಮಮಾಲಿನಿಯನ್ನು 'ಕನ್ಯೆ' ಎನ್ನುತ್ತಾರಲಾ...?*
'ಕನ್ಯೆ' ಅಲ್ಲ, 'ಕನಸಿನ ಕನ್ಯೆ'; ಇನ್ನು ಅವರು ಕನ್ಯೆಯಾಗುವುದು ಕನಸೇ ಆದ್ದರಿಂದ ಹಾಗೆನ್ನುವರಂತೆ!

*ಭಾನುಮತಿ ಭೋಜರಾಜ್, ಬಂಟ್ವಾಳ*
*ರಾಮ-ಲಕ್ಷ್ಮಣ, ಭೀಮಾರ್ಜುನ, ಕೋಟಿ-ಚೆನ್ನಯ್ಯ ಸಹೋದರರಂತೆ ಆದರ್ಶವಾದ ಸಹೋದರಿಯರ ಜೋಡಿ ಯಾವುದಾದರೂ ಇದೆಯೇ?*
ಸಂಗೀತದಲ್ಲಿ ಲತಾ, ಆಶಾ, ಉಷಾ ಮಂಗೇಶ್ಕರ್; ಕ್ರೀಡೆಯಲ್ಲಿ ವೀನಸ್, ಸೆರೀನಾ ವಿಲಿಯಮ್ಸ್; ತ್ಯಾಗಕ್ಕೆ ಸೀತೆ, ಊರ್ಮಿಳಾ; ಸಹಬಾಳ್ವೆಗೆ ಮಾಂಡವಿ ಶೃತಕೀರ್ತಿ!

*ಹಾಡ್ಯ ಜಯಾನಂದ, ಮೈಸೂರು*
*ಕಣ್ಣಿದ್ದೂ ಕುರುಡರಂತೆ, ಕಿವಿಯಿದ್ದೂ ಕಿವುಡರಂತೆ ಬಾಳಬೇಕೆ?*
ಪಡ್ಡೆ ಹುಡುಗರ ವೇಷ, ಟಿವಿ ನಿರೂಪಕಿಯರ ಭಾಷೆಗಳ ಬಗ್ಗೆ ಹೀಗಿರುವುದೇ ಸರಿ!

*ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ*
*ಓದುಗರ ನೂರಾರು ಪ್ರಶ್ನೆಗಳಿಗೆ ಉತ್ತರಿಸುವ ರಾಂ, ನಿಮಗೆಷ್ಟು ತಲೆಯಿದೆ?*
ಪ್ರಶ್ನೋತ್ತರ ನೀಡಲು ಏಳುತಲೆ, ಮಂಥನಕೆ ಹತ್ತುತಲೆ, ಪರಿಹಾರ ಸಿಗಲು ಆರುತಲೆ ಇರುವಷ್ಟು ತಲೆ!

*ನೆ.ಸು.ಆನಂದ್, ಬೆಂಗಳೂರು*
*ಪ್ರೇಮಾಂಕುರದ ಉಗಮ ಹೃದಯದಲ್ಲೋ, ಹಣ ತುಂಬಿದ ಕಿಸೆಯಲ್ಲೋ?*
ಹದಿಹರೆಯದ ಬಿಸಿಯಲ್ಲಿ!

*ಎನ್.ವಸಂತಾ, ಬೆಂಗಳೂರು*
*ಮೈತುಂಬಾ ಚಿನ್ನಾಭರಣ ಧರಿಸಿ ಕಿವಿ ಮಾತ್ರ ಹಿತ್ತಾಳೆಯಾಗಿಸಿಕೊಳ್ಳುವ ನನ್ನ ಗೆಳತಿಯ ಮರ್ಮವೇನು ಅಣ್ಣಯ್ಯಾ?*
ಹಾಳು ಹಾಳೆಗೆ ಹಿತ್ತಾಳೆಯೇ ತಾಳೆ!

## ಬಹುಮಾನಿತ ಪ್ರಶ್ನೆ

*ಕೆ.ಎನ್. ನಾರಾಯಣರೆಡ್ಡಿ, ಕೆ.ಜಿ.ಎಫ್*
*ಇತರರ ಜಾತಕಗಳನ್ನು ಹೊಂದಿಸುವ ಅರ್ಚಕರ ಮನೆಗಳಲ್ಲೇ ಯೌವನದಲ್ಲಿರುವ ವಿಧವೆಯರಿರುತ್ತಾರಲ್ಲಾ ಸಾರ್...?*
ನವಗ್ರಹಗಳೂ ಸೇರಿ ದಶಮಗ್ರಹಕ್ಕೆ ಗೇಟ್ ಪಾಸ್ ಕೊಡಿಸುತ್ತವೋ ಏನೋ!

*ಎಸ್.ಎನ್.ಮಹಾಬಲರಾವ್, ನರಸಿಂಹರಾಜಪುರ*
*ಸಾವಿಗೆ ನ್ಯಾಯವಿಲ್ಲ, ಏಕೆ?*
ಮೇಲ್ಮನವಿ ಸಲ್ಲಿಸಲು ಮೇಲ್ಮನೆಗೆ ದಾರಿ ತಿಳಿದಿಲ್ಲವಾದ್ದರಿಂದ!

*ನರಸಿಂಹ ಎಂ. ಪೈ, ಹೊನ್ನಾವರ*
*ವರ್ಧಂತಿ ಮತ್ತು ಜಯಂತಿಗೆ ಏನು ಅಂತರ?*
ರಜ ಸಿಕ್ಕರೆ ಜಯಂತಿ, ಇಲ್ಲವಾದರೆ ವರ್‌ರ್‌ರ್‌ರ್....ಧಂತಿ!

*ಪಿ.ಎನ್. ಶ್ರೀವತ್ಸ, ಬೆಂಗಳೂರು*
*ವೀರಪ್ಪನ್ ಸಾವಿಗೂ, ಬಿನ್ ಲಾಡೆನ್ ಸಾವಿಗೂ ವ್ಯತ್ಯಾಸವಿದೆಯೇ?*
ಕಾಡುಗಳ್ಳ ಸತ್ತಾಗ ನಿರಾಳ ಎಂದರು, ಕಾಡುವ ಖಳ ಸತ್ತಾಗ ನೀರಾಳ ನೋಡಿದರು!

*ಎಂ.ಎಸ್. ಗುರುರಾಜಾಚಾರು, ಬಳ್ಳಾರಿ*
*ಪ್ರೀತಿಗೂ, ಗರಗಸಕ್ಕೂ ಏನು ವ್ಯತ್ಯಾಸ?*
ಪ್ರೀತಿಗೆ ಸೊಲ್ಲು ಮುಖ್ಯ, ಗರಗಸಕ್ಕೆ ಹಲ್ಲು ಮುಖ್ಯ.

*ಎಂ. ಮಂಜುಳಾ ಸಿದ್ದರಾಜು, ಭದ್ರಾವತಿ*
*ಅಂದಿಗೆ ರಾಮಾಯಣ, ಮಹಾಭಾರತದಂತಹ ಗ್ರಂಥಗಳು; ಇಂದಿಗೆ?*
ಇಂದಿಗೆ, ಒಂದೊಂದು ಸೀರಿಯಲ್ಲೂ ಮಹಾಭಾರದ ರಾಮಾಯಣ!

*ವಿದ್ಯಾನಾಗ್, ಬೆಂಗಳೂರು*
*ರಾಮ್ ಅವರೆ, ನಿಮ್ಮ ಉತ್ತರಗಳನ್ನು ನೋಡಿದರೆ ನೀವು ಹೆಂಗಸರ ಪಕ್ಷಪಾತಿ ಎಂದು ಅನಿಸುತ್ತದಲ್ಲಾ, ಏಕೆ?*



ಗುಡ್; ಅಂತಹ ಅಭಿಪ್ರಾಯ ಮೂಡಿದರೆ ಹೋದ ಮನೆಯಲ್ಲಿ ಎರಡು ತುತ್ತಾದರೂ ಗಿಟ್ಟುತ್ತದೆ!



ರಾಮ್